# ವಾರ್ತಾಸೌರಭ...

CHRIST JUNIOR COLLEGE
BENGALURU - 29

ಡಿಸೆಂಬರ್ 2016 ಸಂಪುಟ1, ಸಂಚಿಕೆ-1

## ಪ್ರಾಂಶುಪಾಲರ ಮಾತು

ಮಕ್ಕಳಿಗೆ ಉತ್ತಮ್ಮ ಶಿಕ್ಷಣ ನೀಡುವುದರ ಜೊತೆಗೆ ಅವರಲ್ಲಿ ಪ್ರತಿಭೆಯ ಛಾಪನ್ನು ಮೂಡಿಸುವುದು ನಮ್ಮ ಶಿಕ್ಷಣ ಸಂಸ್ಥೆಯ ಮುಖ್ಯ ಉದ್ದೇಶಗಳಲ್ಲೊಂದು. ವಿದ್ಯಾರ್ಥಿಗಳಲ್ಲಿ ಅವಿತಿರುವ ಕೌಶಲ್ಯಗಳನ್ನು ಹೊರತಂದು ಅವರನ್ನು ವೇಗವಾಗಿ ಬೆಳೆಯುತ್ತಿರುವ ಸ್ಪರ್ಧಾತ್ಮಕ ಜಗತ್ತಿನಲ್ಲಿ ಜಯಿಸಲು ಸಜ್ಜುಗೊಳಿಸಬೇಕು. ಈ ನಿಟ್ಟಿನಲ್ಲಿ ನಮ್ಮ ವಿದ್ಯಾಸಂಸ್ಥೆ ಅನೇಕ ಸಂಘಗಳನ್ನು ರೂಪಿಸಿದೆ. ವಿದ್ಯಾರ್ಥಿಗಳ ಭಾಷಾ ಕೌಶಲ್ಯಗಳನ್ನು ಮತ್ತು ಸಾಹಿತ್ಯಾತ್ಮಕ ಕಲೆಗಳನ್ನು ಪ್ರೋತ್ಸಾಹಿಸಲೆಂದೇ 'ಪ್ರೇರಣಾ' ಎಂಬ ಸಂಘವನ್ನು ರೂಪಿಸಲಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಅವರ ಪ್ರತಿಭೆ ತೋರಲು ಅವಕಾಶ ನೀಡುವುದರ ಜೊತೆಗೆ ಅವರನ್ನು ತಿದ್ದಿ-ತೀಡಿ ಅವರನ್ನು ಅನರ್ಘ್ಯ ರತ್ನಗಳನ್ನಾಗಿಸುವ ಕೆಲಸ ನಡೆಯುತ್ತಿದೆ. ನಿಜ ಜೀವನ ಮತ್ತು ಪುಸ್ತಕದ ಪಾಠಗಳ ನಡುವಿನ ಅಂತರವನ್ನು ಭರಿಸಲು ಅನೇಕ ವಿಧಾನಗಳನ್ನು ಇಲ್ಲಿ ಅನುಸರಿಸಲಾಗುತ್ತಿದ್ದೆ. ನೃತ್ಯ, ನಾಟಕ, ಭಾಷಣ, ಹಾಡುಗಾರಿಕೆ, ಹೀಗೆ ಹಲವಾರು ಬಗೆಯ ನೈಪುಣ್ಯತೆಯನ್ನು ವಿದ್ಯಾರ್ಥಿಗಳು ಪಡೆಯಲು ಈ ವೇದಿಕೆ ಸಹಕಾರಿಯಾಗಿದೆ.

-ರೇ.ಫಾ.ಸೆಬಾಸ್ಟಿಯನ್ ಮಥಾಯ್





ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣ ಇಲಾಖೆ ಆಯೋಜಿಸಿದ್ದ ಜಿಲ್ಲಾ ಮಟ್ಟದ ಹಲವಾರು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ,ಪ್ರಶಸ್ತಿಗಳನ್ನು ಪಡೆದಿದ್ದಾರೆ. ೧ ಪಿ . ಯು. ತರಗತಿಗೆ ಬೆಂಗಳೂರಿನ ಜಯನಗರದಲ್ಲಿರುವ ಎನ್.ಎಂ.ಕೆ.ಆರ್.ವಿ ಕಾಲೇಜಿನಲ್ಲಿ ಹಾಗು ೨ ಪಿ.ಯು. ತರಗತಿಗೆ ಜಯನಗರದಲ್ಲಿಯೇ ಇರುವ ವಿಜಯ ಕಾಲೇಜಿನಲ್ಲಿ ಸ್ಪರ್ಧೆಗಳಿದ್ದವು. ಏಕಪಾತ್ರಾಭಿನಯ,ಚರ್ಚಾ ಸ್ಪರ್ಧೆ, ಪ್ರಬಂಧ ಲೇಖನ, ಭಾವಗೀತೆ ಸ್ಪರ್ಧೆ ಹೀಗೆ ಹಲವಾರು ಸ್ಪರ್ಧೆಗಳಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದರಷ್ಟೇ. ನಮ್ಮ ವಿದ್ಯಾರ್ಥಿ ಮಿತ್ರರಾದ ಪೂಜಾ.ಎನ್. ಹಾಗು ನಯನ.ಎಸ್.ಜಾಧವ್ ದಾವಣಗೆರೆಯಲ್ಲಿ ನಡೆಯಲಿರುವ ವಿಭಾಗೀಯ ಸ್ಪರ್ಧೆಗೆ ಆಯ್ಕೆಗೊಂಡಿದ್ದಾರೆ.



| ಹೆಸರು | ತರಗತಿ | ಸ್ಪರ್ಧೆ | ಸ್ಥಾನ |
|---|---|---|---|
| ನಯನ ಎಸ್ ಜಾದವ್ | ದ್ವಿತೀಯ ಪಿ.ಯು. ವಾಣಿಜ್ಯ | ಏಕಪಾತ್ರಾಭಿನಯ | ಪ್ರಥಮ |
| ಸೃಜನ ಮೋಹನ್ | ದ್ವಿತೀಯ ಪಿ.ಯು .ವಾಣಿಜ್ಯ | ಆಶುಭಾಷಣ | ದ್ವಿತೀಯ |
| ವಿಶ್ರುತ | ದ್ವಿತೀಯ ಪಿ.ಯು. ವಾಣಿಜ್ಯ | ಪ್ರಬಂಧಲೇಖನ | ತೃತೀಯ |
| ಪೂಜಾ.ಎನ್ | ಪ್ರಥಮ ಪಿ.ಯು. ವಾಣಿಜ್ಯ | ಚರ್ಚಾಸ್ಪರ್ಧೆ | ಪ್ರಥಮ |
| ಕಾರ್ತಿಕೇಯ. ಎಸ್. ಉಡುಪ | ಪ್ರಥಮ ಪಿ.ಯು . ವಿಜ್ಞಾನ | ಆಶುಭಾಷಣ<br>ಏಕಪಾತ್ರಾಭಿನಯ | ದ್ವಿತೀಯ<br>ತೃತೀಯ |
| ಐಶ್ವರ್ಯ | ಪ್ರಥಮ ಪಿ.ಯು . ವಿಜ್ಞಾನ | ಭಾವಗೀತೆ | ತೃತೀಯ |

## ಪ್ರೇರಣಾ ಸಂಘದ ಉದ್ಘಾಟನೆ

ಭಾವನೆಗಳನ್ನು ಭಾಷೆಯ ಹಾಗು ಪದಗಳ ಮೂಲಕ ತಿಳಿಸುತ್ತೇವೆ.ಆದ್ದರಿಂದ ಭಾಷೆ ಎಂಬುದು ಸಂವಹನಕ್ಕೆ ಹಾಗು ನಮ್ಮನ್ನು ನಾವು ವ್ಯಕ್ತಪಡಿಸಿಕೊಳ್ಳುವುದಕ್ಕೆ ಅವಶ್ಯಕ. ಭಾಷೆ ಒಂದು ಮಾಧ್ಯಮ,ಇಂತಹ ಭಾಷೆಗಳಿಗಾಗಿಯೇ 'ಪ್ರೇರಣಾ' ಸಂಘ ಹುಟ್ಟಿಕೊಂಡಿದೆ. ಭಾಷೆ ಮತ್ತು ಸಾಹಿತ್ಯವನ್ನುಬೆಳೆಸಿ,ಪ್ರೋತ್ಸಾಹಿಸುವ ಸಲುವಾಗಿ 'ಪ್ರೇರಣಾ'ಸಂಘವು ಕಾರ್ಯ ನಿರ್ವಹಿಸುತ್ತದೆ ಭಾಷೆಯಲ್ಲಿ ಆಸಕ್ತಿ ಹಾಗು ಅದರ ಬಗ್ಗೆ ತಿಳಿದುಕೊಳ್ಳಲು 'ಪ್ರೇರಣಾ' ಸಂಘಕ್ಕೆ ಸೇರಿದೆ.ದಿನಾಂಕ **29-06-16** ರಂದು ಎಲ್ಲಾ ಸಂಘಗಳೊಂದಿಗೆ ಉದ್ಘಾಟನೆಗೊಂಡ ಈ ಸಂಘದ ಪದಾಧಿಕಾರಿಯಾಗಿ ತೇಜಸ್ ಕೆ.ವಿ.ಎಂಬ ವಿದ್ಯಾರ್ಥಿ ಮಿತ್ರರೊಬ್ಬರು ಆಯ್ಕೆಗೊಂಡರು.ಇದರ ಭಾಗವಾಗಿ 'ಕೋರ್ ಮಿಟಿಯೊಂದರ' ಅಡಿಯಲ್ಲಿ ಹಲವಾರು ಸಮಿತಿಗಳು ಕೆಲಸಮಾಡುತ್ತಿವೆ. ಇದಾದ ನಂತರ ನೋಂದಣಿ ಪ್ರಕ್ರಿಯೆಶುರುವಾಯಿತು. ಹಲವಾರು ವಿದ್ಯಾರ್ಥಿಗಳು ಬಂದು ಸೇರಿಕೊಂಡರು. ಅದಾದ ನಂತರದಲ್ಲಿಯೇ ನಮ್ಮ 'ಮೊದಲಸಭೆ' ಎನ್ನುವುದು ನಡೆಯಿತು. ಇದನ್ನುನಮ್ಮಹಿರಿಯ ವಿದ್ಯಾರ್ಥಿಗಳುನಡೆಸಿಕೊಟ್ಟರು. ಬಹಳಷ್ಟುವಿದ್ಯಾರ್ಥಿಗಳು ಉತ್ಸುಕರಾಗಿಭಾಗವಹಿಸಿದ್ದೆವು.ಇದ್ದನು ನೋಡಿದ, ಕಂಡ ನಮ್ಮ ಹಿರಿಯವಿದ್ಯಾರ್ಥಿಗಳಿಗೂ ಸಂತೋಷವಾಯಿತು.ಸಂಘದ ಕಾರ್ಯರೀತಿಯ ಬಗ್ಗೆ, ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು.ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪಾಲ್ಗೊಳ್ಳುವಂತೆ ಹಾಗು ಸಂಘದ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಕರೆನೀಡಲಾಯಿತು. ಸಂಘದ ಮುಂಬರುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿ ಸಕ್ರಿಯರಾಗಿ ಪಾಲ್ಗೊಳ್ಳುವಂತ ಆಸಕ್ತಿ ಹಾಗು ಅವಕಾಶವನ್ನು ಮೂಡಿಸಿದರು. ಈ ಸಂಘದ ಸಂಚಾಲಕರಾದ ಭಾಸ್ಕರ್ ಸರ್ ಹಾಗು ಸುಮ್ಮೈಯ್ಯ ಮೇಡಂರವರು ನಮನ್ನೆಲ್ಲ ಉದ್ದೇಶಿಸಿ ಮಾತನಾಡಿದರು. ಸಂಘ ಬಹಳವೇ ಚುರುಕು ಹಾಗು ಚಟುವಟಿಕೆಯಿಂದಕೂಡಿತ್ತು. ನಮ್ಮಪ್ರತಿಭೆ ಪ್ರಸ್ತುತಪಡಿಸಿಕೊಳ್ಳಲು ಅದೊಂದು ವೇದಿಕೆಯಾಗಿತ್ತು.ಒಟ್ಟಿನಲ್ಲಿ ಪ್ರೇರಣದೊಂದಿಗಿನ ಒಡನಾಟ ನನಗೆ ಹೊಸ ಅನುಭವ ಹಾಗು ಚಿಂತನೆಯನ್ನು ನೀಡಿದೆ.

ಅರ್ಪಿತ ಹೆಚ್.ಬಿ.
೧ ಹೆಚ್.ಇ.ಪಿ.ಪಿ. 'ಎನ್'






## ಭಾಷಾ ಸಪ್ತಾಹ

ಭಾಷಾ ಜ್ಞಾನ ಮಾನವ ಕುಲವು ತನ್ನ ಮುಂಬರುವ ಪೀಳಿಗೆಗೆ ನೀಡಿರುವ ಅಮೂಲ್ಯ ಕೊಡುಗೆಯಾಗಿದೆ. ಇದೆ ಭಾಷೆಯ ಮಹತ್ವವನ್ನುಸಾರಲು ಆಗಸ್ಟ್ ತಿಂಗಳಿನ ಮೊದಲ ವಾರದಲ್ಲಿ 'ಭಾಷಸಪ್ತಾಹ'ವನ್ನು ಆಚರಿಸಲಾಯಿತು. ಇದರ ಉದ್ದೇಶವು ಭಾಷೆಯ ಬಗ್ಗೆ ತಿಳುವಳಿಕೆ ಹಾಗು ಪ್ರೀತಿಯ ಸಂದೇಶವಾಗಿದ್ದು, ಅಭಿವ್ಯಕ್ತಿಗೊಳಿಸುವಲ್ಲಿ ಸಂಯೋಜಕರು ನಡೆಸಿದ ಪ್ರಯತ್ನ ಹೊಸತಾಗಿಯೂ ಫಲಕಾರಿಯೂ ಆಯಿತು. ಈ ನಿಟ್ಟಿನಲ್ಲಿ ಆಯೋಜಿಸಲಾದ "ಸಂಬಂಧ-ಅನುಬಂಧ", "ಪ್ರಶ್ನೋತ್ತರಮಾಲಿಕೆ", "ಚಟ್-ಪಟ್ ಚಿನಕುರಳಿ", "ಪದಬಂಧ", "ಒಗಟುಗಳು" ಮುಂತಾದ ಚಟುವಟಿಕೆಗಳು ಕನ್ನಡಾಭಿಮಾನಿಗಳ ಮನಸೆಳೆಯುವಲ್ಲಿ ಯಶಸ್ವಿಯಾಯಿತು. ಒಂದೆಡೆ ಈ ಮೇಲಿನ ಚಟುವಟಿಕೆಗಳು ಮನರಂಜನೆಗಾದರೆ ,ಕನ್ನಡ ಚರ್ಚಾಸ್ಪರ್ಧೆ,ಗಾಯನಸ್ಪರ್ಧೆ ಹಾಗು ಕವಿತೆ ರಚನೆ ಸ್ಪರ್ಧೆಗಳು ಸಹ ಬಹಳಷ್ಟು ಜನರ ಭಾಗವಹಿಸುವಿಕೆಗೆ ಸಾಕ್ಷಿಯಾಯಿತು. ಇಂತಹ ಅನೇಕ ಕಾರ್ಯಕ್ರಮಗಳನ್ನುಹಮ್ಮಿಕೊಳ್ಳುವುದರಿಂದ ಭಾಷಾಭಿಮಾನ, ಪ್ರೀತಿ,ಗೌರವ, ಆದರಗಳು ವೃದ್ಧಿಗೊಂಡು ಅಳಿವಿನಂಚಿಗೆ ಸಾಗುತ್ತಿರುವ ಭಾಷೆಗಳನ್ನುಉಳಿಸಿಕೊಂಡು, ಹೆಮ್ಮರವಾಗಿ ಬೆಳೆಸುವಲ್ಲಿ ನೀರಿನ ಸಿಂಚನವಾಗುವುದುನಿಸ್ಸಂಶಯ.





ಸಂಹಿತ ಭಟ್
೨ ಪಿ.ಪಿ.ಇ.ಎಸ್. 'ಒ'

# ಸ್ಪರ್ಧೆ-ಸಾಧನೆ

ಹೊನ್ನು ಆಭರಣವಾಗಿ ಹೊಳೆಯುವ ಮುನ್ನ ಅಗ್ನಿ-ಪರೀಕ್ಷೆಯನ್ನು ಎದುರಿಸಲೇಬೇಕು. ಇದು ಸಾರ್ವತ್ರಿಕ ಸತ್ಯ. ಅಂತೆಯೇ ಪ್ರತಿಭೆಗಳು ತಮ್ಮ ಪ್ರತಿಭೆಯ ಪ್ರಭೆಯನ್ನು ತೋರಲು ಸ್ಪರ್ಧೆ ಎಂಬ ಅಗ್ನಿಪರೀಕ್ಷೆಗೆ ತಮ್ಮನ್ನು ತಾವು ಒರೆ ಹಚ್ಚಲೇಬೇಕು. ಆಗ ಮಾತ್ರವೇ ಪ್ರತಿಭಾ ರತ್ನಕ್ಕೆ ಮೆರುಗು. ಈ ತತ್ವಕ್ಕೆ ಕನ್ನಡಿ ಹಿಡಿದಂತೆ ನಮ್ಮ ಕಾಲೇಜಿನ ಅನರ್ಘ್ಯ ಪ್ರತಿಭಾ ರತ್ನಗಳು, 'ಪ್ರೇರಣ' ಸಂಘದ ವತಿಯಿಂದ ಅನೇಕ ಅಂತರ್ ಕಾಲೇಜು ಸ್ಪರ್ಧೆಗಳಲ್ಲಿ ತಮ್ಮ ಕ್ಷಮತೆಯನ್ನು ಸಾಬೀತು ಮಾಡುತ್ತ ಬಂದಿದ್ದಾರೆ. ಬೈಟ್ ವೇ ಪಿ.ಯು. ಕಾಲೇಜಿನ ಸಾಂಸ್ಕೃತಿಕ ಸ್ಪರ್ಧೆಗಳ ಭಾಗವಾಗುವ ಮೂಲಕ ನಮ್ಮ ಈ ವಸಂತದ ಅಂತರ್ ಕಾಲೇಜು ಸ್ಪರ್ಧೆಗಳ ಯಾನ ಆರಂಭವಾಯಿತು. ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿ ತೇಜಸ್ ಕೆ.ವಿ. ತೃತೀಯ ಬಹುಮಾನ ಪಡೆಯುವ ಮೂಲಕ ಮೊದಲ ಜಯ ತಂದರು. ವಿ.ಎಸ್.ಕೃಷ್ಣಯ್ಯರ್ ಸಂಯುಕ್ತ ಪದವಿ ಪೂರ್ವ ಕಾಲೇಜು ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ಚರ್ಚಾ ಪಟುಗಳಾದ ಪೂಜಾ ಎನ್. ಮತ್ತು ತೇಜಸ್ ಕೆ.ವಿ. ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ಪಡೆದಿರುತ್ತಾರೆ. ಅಷ್ಟೇ ಅಲ್ಲದೆ ಈ ತಂಡಕ್ಕೆ ಪ್ರತಿಷ್ಠಿತ 'ಟಿ.ಆರ್.ಶ್ಯಾಮಣ್ಣ ಸ್ಮರಣಾರ್ಥ ಪಾರಿತೋಷಕ'ವೂ ಲಭಿಸಿದೆ. ಬಸವೇಶ್ವರನಗರದ ಕಾರ್ಮಲ್ ಕಾಲೇಜಿನಲ್ಲಿ ನಡೆದ ಏಕಪಾತ್ರಾಭಿನಯ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ನಯನ ಎಸ್. ಜಾಧವ್ ರವರು ತೃತೀಯ ಬಹುಮಾನ ಪಡೆಯುವ ಮೂಲಕ ತಮ್ಮ ಅಭಿನಯ ನೈಪುಣ್ಯತೆಯನ್ನು ಸಾಬೀತುಪಡಿಸಿದ್ದಾರೆ. ಇಷ್ಟೇ ಅಲ್ಲದೆ ಇನ್ನೂ ಅನೇಕ ಅಂತರ್-ಕಾಲೇಜು ಸ್ಪರ್ಧೆಗಳಲ್ಲಿ ನಮ್ಮ ವಿದ್ಯಾರ್ಥಿಗಳು ಭಾಗವಹಿಸಿದ್ದು ನಮ್ಮ ವಿದ್ಯಾ ಸಂಸ್ಥೆಗೆ ಕೀರ್ತಿಯನ್ನು ತಂದಿರುತ್ತಾರೆ. 'ಬಚ್ಚಿಟ್ಟ ಪ್ರತಿಭೆ ಕೊಳೆಯುತ್ತದೆ, ಬಿಚ್ಚಿಟ್ಟ ಪ್ರತಿಭೆ ಹೊಳೆಯುತ್ತದೆ' ಎಂಬ ಮಾತಿನಂತೆ ನಮ್ಮ ವಿದ್ಯಾರ್ಥಿಗಳು ಸ್ಪರ್ಧೆಯೆಂಬ ಅನುಭವದ ಪೋಷಣೆಯ ಮೂಲಕ ತಮ್ಮ ಪ್ರತಿಭೆಗಳನ್ನು ಇನ್ನೂ ಸಮೃದ್ಧವಾಗಿಸಿಕೊಳ್ಳುತ್ತಿದ್ದಾರೆ.

ತೇಜಸ್ ಕೆ. ವಿ.
-೨ಪಿಸಿಎಂಇ 'ಇ'













# ಬೀದಿ ನಾಟಕ-'ಈ ಸಾವು ನ್ಯಾಯವೇ'

ನಮ್ಮಕಾಲೇಜಿನ ಪ್ರೇರಣಾ ಸಂಘದ ಒಂದು ಭಾಗವಾಗಿರುವ 'ಬೀದಿ ನಾಟಕಶಿಬಿರ' ಪ್ರತಿ ವರ್ಷ ನಮ್ಮಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯ-ಅನೀತಿಗಳನ್ನು ಜನರ ಮನಸ್ಸಿಗೆ ಪರಿಣಾಮಕಾರಿಯಾಗಿ ಮುಟ್ಟಿಸುವ ಬೀದಿ ನಾಟಕಗಳನ್ನು ಪ್ರದರ್ಶಿಸಿ ಯಶಸ್ವಿಯಾಗಿದೆ. ಇದು ನಮ್ಮ 'ಕಾಲೇಜಿನ ರಂಗಭೂಮಿ'. ಪ್ರತಿ ವರ್ಷ ಈ ಶಿಬಿರದಲ್ಲಿ ನಟನೆಯ ಆಸಕ್ತಿ ಇರುವ ಅನೇಕ ಹೊಸ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ. ಈ ಶಿಬಿರದ ಆಯೋಜಕರಾಗಿ ನಮ್ಮಶಿಕ್ಷಕರಾದ ಭಾಸ್ಕರ್ ಸರ್ ಹಾಗೂ ಸಂಘದ ಹಿರಿಯ ವಿದ್ಯಾರ್ಥಿಗಳು, ಬರುವ ವಿಧ್ಯಾರ್ಥಿಗಳಿಗೆ ಉತ್ತಮ ತರಬೇತಿ ನೀಡಿ ನಟನೆಯಲ್ಲಿ ಪಳಗುವಂತೆ ಮಾರ್ಗದರ್ಶನ ನೀಡುತ್ತಾರೆ. ಈ ಶಿಬಿರವು ಹಲವಾರು ವರ್ಷಗಳಿಂದ ನಡೆದುಕೊಂಡುಬಂದಿದ್ದು, ನೂರಾರು ವಿದ್ಯಾರ್ಥಿಗಳಿಗೆ ತರಬೇತಿನೀಡಿದೆ. ಹಲವಾರು ವರ್ಷಗಳಿಂದ ನಡೆಯುತ್ತಿರುವ ರಂಗ ತರಬೇತಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಇಂದು ಕನ್ನಡ ಚಿತ್ರರಂಗದಲ್ಲಿ ಹೆಸರುಮಾಡಿದ್ದಾರೆ. ಈ ವರ್ಷ " ಈ ಸಾವು ನ್ಯಾಯವೇ " ಎಂಬ ರೈತರಿಗಾಗುತ್ತಿರುವ ಅನ್ಯಾಯ ಹಾಗು ಅವರು ಪಡುತ್ತಿರುವ ನೋವನ್ನು ಕುರಿತು ಬೀದಿನಾಟಕ ಪ್ರದರ್ಶಿಸಿದೆವು. ರೈತರದ್ದು ಕಠಿಣ ಜೀವನ. ಕಷ್ಟಪಟ್ಟು ಸಾಲಮಾಡಿ ಬಿತ್ತನೆ ಮಾಡಿದರೂ ಕೆಲವೊಮ್ಮೆ ಹಲವಾರು ಕಾರಣಗಳಿಂದ ಬೆಳೆಸರಿಯಾಗಿ ಬರದೇ ನಷ್ಟ ಅನುಭವಿಸುತ್ತಾನೆ. ಇತ್ತಕಡೆ ಸಾಲ ಕೊಟ್ಟಿರುವ ಬ್ಯಾಂಕಿನವರು ಹಣ ತೀರಿಸುವಂತೆ ಪೀಡಿಸುತ್ತಾರೆ. ಎಷ್ಟೇ ಬೇಡಿದರೂ ಸಹಾಯ ಮಾಡಲು ಯಾರು ಮುಂದೆ ಬಾರದೇ, ಸಾಲಗಾರರ ಕಾಟಕ್ಕೆ ಬೇಸತ್ತ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಈ ಸಮಸ್ಯೆಯನ್ನುಆಧಾರವನ್ನಾಗಿ ಇಟ್ಟುಕೊಂಡು ಸಮಾಜಕ್ಕೆಅರಿವು ಮೂಡಿಸಿ ರೈತರ ಕಷ್ಟಕ್ಕೆ ಸ್ಪಂದಿಸುವಂತೆ ಮಾಡುವುದೇ ಈ ನಾಟಕದ ಉದ್ದೇಶವಾಗಿತ್ತು. ಈ ವರ್ಷ 20 ದಿನಗಳ ಕಾಲ ನಡೆದ ಶಿಬಿರದಲ್ಲಿ 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.ಎಲ್ಲರೂ ಈ ನಾಟಕದ ಹಾಗು ವಿದ್ಯಾರ್ಥಿಗಳ ನಟನೆಯ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಪಾತ್ರಕ್ಕೆ ತಕ್ಕ ಭಾವನೆ ವ್ಯಕ್ತಪಡಿಸುವುದು, ತರಬೇತಿಯ ಮೂಲಕ ತಪ್ಪುಗಳನ್ನು ತಿದ್ದಿಕೊಂಡು, ಸ್ವಲ್ಪತರಲೆ ಇದ್ದ ಈ ಶಿಬಿರದಲ್ಲಿ ಪಾಲ್ಗೊಂಡವರು ಮುಂದೆ ದೊಡ್ಡ ನಟ-ನಟಿಯರಾಗುವ ತಮ್ಮ ಕನಸಿನತ್ತ ಸಾಗುತ್ತಿದ್ದಾರೆ.

-ಹೇಮಂತ್ ವಿ.
೧ ಸಿ.ಎ.ಎಮ್.ಎಸ್. 'ಜೆ'

# ನೂರು ರೂಪಾಯಿ- ಸಾಕ್ಷ್ಯಚಿತ್ರ ಪ್ರದರ್ಶನ

ದಿನಾಂಕ **25-06-2016**ರಂದು ರಾಷ್ಟ್ರ ಪ್ರಶಸ್ತಿ ಪಡೆದ "ನೂರುರೂಪಾಯಿ" ಕಿರುಚಿತ್ರದ ಪ್ರದರ್ಶನವನ್ನು 'ಪ್ರೇರಣಾ' ಸಂಘವು ಹಮ್ಮಿಕೊಂಡಿತ್ತು. ಈ ಸಾಕ್ಷ್ಯ ಚಿತ್ರದ ಬಗ್ಗೆವಿಮರ್ಶಾ ಲೇಖನದ ಸ್ಪರ್ಧೆಯೂ ನಡೆದಿತ್ತು. ಹಲವಾರು ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ-ತಮ್ಮಅನಿಸಿಕೆ ಅಭಿಪ್ರಾಯಗಳನ್ನುಹಂಚಿಕೊಂಡರು. ಕೆಲವರು ಭಾವುಕರಾದರೆ ಮತ್ತೆ ಕೆಲವರು ಮೆಚ್ಚುಗೆ ವ್ಯಕ್ತಪಡಿಸಿದರು. ವಿಚಾರ ವಿನಿಮಯವಾಯಿತು. ಬೇರೆ-ಬೇರೆ ಆಯಾಮಗಳು ದೊರಕಿದವು. ಪ್ರಶಾಂತ್ ರಾಜ್ ದೇಶನದ ಸಾಕ್ಷ್ಯ ಚಿತ್ರವಾದ "ನೂರು ರೂಪಾಯಿ" ಅದ್ಭುತವಾಗಿದೆ. ಗಾಂಧಿಯ ಮಾತುಗಳ ಪ್ರಾಮುಖ್ಯತೆಯೊಡನೆ ಮುಗ್ಧ ಮನಸ್ಸುಗಳ ಆಸೆಗಳನ್ನುಸೂಕ್ಷ್ಮಪದರಗಳಿಂದ ಎಳೆಎಳೆಯಾಗಿ ಬಿಚ್ಚಿಡಲಾಗಿದೆ.

ಕವನ ವಿ.
೧ ಸಿ.ಎ.ಎಮ್.ಎಸ್. 'ಕೆ'







# ಇರುಳಿಗರು ಒಂದು ಸಂಸ್ಕೃತಿ

ದಿನಾಂಕ 1/7/2016 ರಂದು'ಇರುಳಿಗರು-ಒಂದುಸಂಸ್ಕೃತಿ'ಎಂಬುದರ ಬಗ್ಗೆ ಚರ್ಚೆಯೊಂದನ್ನು ಹಮ್ಮಿಕೊಳ್ಳಲಾಗಿತ್ತು.ಇಲ್ಲಿ ಕರ್ನಾಟಕದ ಬುಡಕಟ್ಟುಜನಾಂಗವಾದ 'ಇರುಳಿಗ'ರ ಬದುಕು ಮತ್ತು ಸಂಸ್ಕೃತಿಯ ಬಗ್ಗೆಅಧ್ಯಯನ ನಡೆಸಿ ಕಿರುಚಿತ್ರವೊಂದನ್ನು ತಯಾರಿಸಿ ದೂರದರ್ಶನದಲ್ಲಿ ಪ್ರದರ್ಶನಮಾಡಿದ ಡಾ. ಭೈರೇಗೌಡರವರು ಈ ಚರ್ಚೆಯನ್ನು ನಡೆಸಿಕೊಟ್ಟರು. ಇರುಳಿಗರೊಂದಿಗಿನ ತಮ್ಮ ಒಡನಾಟ, ಅನುಭವಗಳನ್ನು ಹಂಚಿಕೊಂಡು ತಮ್ಮಅಧ್ಯಯನ ನಡೆಸಿದ ರೀತಿಯ ಬಗ್ಗೆತಿಳಿಸಿಕೊಟ್ಟರು. ಆ ಕಿರುಚಿತ್ರದ ಬಗ್ಗೆವಿದ್ಯಾರ್ಥಿಯೊಬ್ಬರ ಅನಿಸಿಕೆ ಹೀಗಿದೆ.-

ಕರ್ನಾಟಕದ ಮೊದಲನೇಅಕ್ಷರ 'ಕ' ಹಾಗು ಕಾಡಿನ ಮೊದಲನೇ ಅಕ್ಷರವೂ 'ಕ'. ಆದ್ದರಿಂದ ಕರ್ನಾಟಕ ಹಾಗು ಕಾಡಿನ ನಡುವೆ ಇರುವ ಅಂತರ ಬಹಳ ಕಡಿಮೆ. ಕರ್ನಾಟಕದ ಬುಡಕಟ್ಟು ಜನಾಂಗದವರು ಪರಿಸರಕ್ಕೆ ಬಹಳ ಹತ್ತಿರ. ಸೋಲಿಗರು, ಇರುಳಿಗರು,ಸಿದ್ಧಿಗಳು, ಇತ್ಯಾದಿ. ಆ ದಿನ ಮಧ್ಯಾಹ್ನ 3.00-4.00ವರೆಗೂ ನಡೆದ ಆ ಮೂವತ್ತುನಿಮಿಷಗಳ ಕಾಲದ ಚರ್ಚೆ ನನ್ನವೈಯಕ್ತಿಕ ಜೀವನದಲ್ಲಿ ಒಳ್ಳೆಯ ಪಾಠಗಳನ್ನುಕಲಿಸಿದೆ. ಈ ಸಂದರ್ಶನ ಕೂಟ ಏರ್ಪಡಿಸಿದಕ್ಕೆ 'ಪ್ರೇರಣಾ' ಸಂಘಕ್ಕೆ ವಂದನೆಗಳು. ಈ ಚರ್ಚೆ ಇರುಳಿಗರು ಎಂಬ ಕರ್ನಾಟಕದ ಒಂದು ಬುಡಕಟ್ಟು ಜನಾಂಗ ಬದುಕಿನ ಬಗ್ಗೆ ನಡೆಯಿತು.ಇವರು ತಲತಲಾಂತರದಿಂದ ಪರಿಸರವೇ ದೇವರು ಎಂದು ಪೂಜಿಸುತ್ತಿರುವ ಮಹಾಜನರು. ಅವರ ಸಂಸ್ಕೃತಿ,ಆಚಾರ-ವಿಚಾರ,ವೇಷಭೂಷಣ,ಆಹಾರ ಹಾಗು ಬದುಕುವ ರೀತಿ ಆಶ್ಚರ್ಯ ಹಾಗು ರೋಮಾಂಚನವನ್ನುಂಟು ಮಾಡುತ್ತದೆ.ಇರುಳಿಗರು ಕಾಡಿನಲ್ಲಿಸಿಗುವ ಗೆಡ್ಡೆ-ಗೆಣಸು,ಹಳ್ಳಕೊಳ್ಳಗಳಲ್ಲಿಸಿಗುವ ಇಲಿ,ಉಡಗಳನ್ನುಸೇವಿಸುತ್ತಾ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಮೂಢನಂಬಿಕೆಗಳು ಅವರ ಲೋಪವಾದರೂ ಸಂಶೋಧನಾಕಾರರು ಈ ಮೂಢನಂಬಿಕೆ ಅವರ ಆತ್ಮವಿಶ್ವಾಸ ಹೆಚ್ಚಿಸುತ್ತದೆ ಎಂದು ಸಾಬೀತುಪಡಿಸಿದ್ದಾರೆ. ದುಡಿಮೆಗಾಗಿ ದನಕುರಿ ಸಾಕುತ್ತ, ಬುಟ್ಟಿಹೆಣೆಯುತ್ತ ಜೀವನ ಸಾಗಿಸುತ್ತಿದ್ದಾರೆ. ಅವರು ಆರ್ಥಿಕ ಮತ್ತುಸಾಮಾಜಿಕ ತೊಂದರೆಗಳನ್ನುಎದುರಿಸುತ್ತಿದ್ದಾರೆ. ನಮ್ಮಕಡೆಯಿಂದ ಅವರಿಗೆ ದೈಹಿಕವಾಗಿ ಸಹಾಯಮಾಡಲಾಗದಿದ್ದರೂ ಮಾನಸಿಕವಾಗಿ ಪ್ರೋತ್ಸಾಹಿಸಬೇಕು. ರಾಜ್ಯಸರ್ಕಾರಇರುಳಿಗರ ಸಮಸ್ಯೆಗಳನ್ನುಅರಿತು ಅವರ ವಾಸಸ್ಥಳಕ್ಕಾಗಿ ಹಲವಾರು ಗ್ರಾಮಗಳನ್ನುಮಾಡಿಕೊಟ್ಟು,ಕುಡಿಯಲು ನೀರು,ರಸ್ತೆ ,ದೀಪಗಳು,ಪಂಚಾಯ್ತಿ,ನೌಕರಿ,ಮನೆಗಳು ಹಾಗು ಇನ್ನಿತರ ಕನಿಷ್ಠ ಸೌಲಭ್ಯಗಳನ್ನುಒದಗಿಸಿ ಸಹಾಯಮಾಡುತ್ತಿದೆ. ನಾವು ಅವರೊಂದಿಗೆ ಕೈಜೋಡಿಸಿ ಸಾಮಾಜಿಕವಾಗಿ ಪ್ರೋತ್ಸಾಹಿಸುತ್ತಹಾಗು ಕೈಲಾದಷ್ಟುಸಹಾಯಮಾಡಬೇಕು ಎಂಬುದು ನನ್ನಒಂದು ಕೂಗು. ಇದು ನಮ್ಮೆಲ್ಲರ ಪ್ರಾಮಾಣಿಕ ಕರ್ತವ್ಯ.

ಯಶಸ್ ಗೌಡ
೧ ಪಿ.ಸಿ.ಎಮ್.ಬಿ. 'ಇ'

**ವಿದ್ಯಾರ್ಥಿ ಸಂಪಾದಕೀಯ ಬಳಗ :**
**ತೇಜಸ್ ಕೆ. ವಿ. -೨ ಪಿಸಿಎಂಇ 'ಇ'**
**ಸಂಹಿತ ಭಟ್ -೨ ಪಿ.ಪಿ.ಇ.ಎಸ್. 'ಒ'**
**ಅರ್ಪಿತ.ಹೆಚ್.ಬಿ -೧ ಹೆಚ್.ಇ.ಪಿ.ಪಿ. 'ಎನ್'**